UASB Library
Newspaper Clippings
THURSDAY 16.03.2023 Pg .1
Jai Kisan

Prajavani Pg- 3B

### ಯುವಜನೋತ್ಸವಕ್ಕೆ ಚಾಲನೆ ನೀಡಿದ ಕೇಂದ್ರ ಕೃಷಿ ಸಚಿವ ತೋಮರ್

# ಹವಾಮಾನ ವೈಪರೀತ್ಯಕ್ಕೆ ತಂತ್ರಜ್ಞಾನದ ರಕ್ಷಣೆ

**ಬೆಂಗಳೂರು: ಕೃಷಿಯ ಎಲ್ಲ ಹಂತಗಳಲ್ಲೂ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ಹವಾಮಾನ ವೈಪರೀತ್ಯಗಳಂತಹ ಪರಿಸ್ಥಿತಿಯಲ್ಲೂ ಸಮೃದ್ಧ ಬೆಳೆ ತೆಗೆಯಬಹುದು, ಲಾಭ ಗಳಿಸಬಹುದು ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದರು.**

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಭಾರತೀಯ ಕೃಷಿ ಅನುಸಂಧಾನ ಪರಿಷತ್ ಬುಧವಾರ ಹಮ್ಮಿಕೊಂಡಿದ್ದ ಅಖಿಲ ಭಾರತ ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವ, ಚತುರ ಕೃಷಿ ಅಭಿವೃದ್ಧಿ ಮತ್ತು ನಾವಿನ್ಯತಾ ಯೋಜನೆಗೆ ಚಾಲನೆ ನೀಡಿ ಮಾತನಾಡಿದರು.

ಎಲ್ಲ ಕ್ಷೇತ್ರಗಳಲ್ಲೂ ಇಂದು ತಾಂತ್ರಿಕತೆ ಪ್ರಮುಖ ಪಾತ್ರ ವಹಿಸುತ್ತಿದೆ. ಅವುಗಳನ್ನು ಸೂಕ್ತವಾಗಿ ಬಳಸಿಕೊಂಡು ಉತ್ತಮ ಸಾಧನೆ ತೋರಬೇಕಿದೆ. ಸೂಕ್ಷ್ಮ ನೀರಾವರಿ ತಂತ್ರಜ್ಞಾನ ಹಾಗೂ ಇತರೆ ತಂತ್ರಜ್ಞಾನಗಳನ್ನು ದೇಶದ ಕೃಷಿ ಕ್ಷೇತ್ರದಲ್ಲಿ ಸಮರ್ಥವಾಗಿ ಬಳಸಿಕೊಳ್ಳಲಾಗಿದೆ. ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡರೆ ಕೃಷಿ ಕಾರ್ಯಗಳು ಸುಲಭವಾಗಲಿವೆ. ಡಿಜಿಟಲ್ ತಂತ್ರಜ್ಞಾನದ ಮೂಲಕ ಆರ್ಥಿಕ ಸೋರಿಕೆಯನ್ನೂ ತಡೆಯಬಹುದು ಎಂದರು.



ಭಾರತದ ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವ ಕಾರ್ಯಕ್ರಮಕ್ಕೆ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್, ಕೃಷಿ ಸಚಿವ ಬಿ.ಸಿ. ಪಾಟೀಲ್ ಮತ್ತು ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಡೋಲು ಹೊಡೆಯುವ ಮೂಲಕ ಚಾಲನೆ ನೀಡಿದರು. ಎಸ್.ವಿ.ಸುರೇಶ, ಆರ್. ಸಿ.ಅಗರ್ವಾಲ್, ಶಿವಯೋಗಿ ಸಿ. ಕಳಸದ ಇದ್ದಾರೆ —ಪ್ರಜಾವಾಣಿ ಚಿತ್ರ

ರಾಜ್ಯದ ಕೃಷಿ ಸಚಿವ ಬಿ.ಸಿ ಪಾಟೀಲ್, 'ಯಕ್ಷಗಾನ, ಡೊಳ್ಳುಕುಣಿತ, ಕಂಸಾಳೆ ನಮ್ಮ ಹಳ್ಳಿಗಾಡಿನ ನಿಜವಾದ ಸಾಂಸ್ಕೃತಿಕ ಕಲೆಯನ್ನು ಬಿಂಬಿಸುತ್ತವೆ. ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ರೈತರ ಮಕ್ಕಳಿಗೆ ಶೇ 40 ಇದ್ದ ಮೀಸಲಾತಿ ಪ್ರಮಾಣವನ್ನು ಶೇ 50ಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಹೆಚ್ಚಿನ ರೈತರ ಮಕ್ಕಳು ಕೃಷಿ ಶಿಕ್ಷಣ ಪಡೆಯಲು ಸಹಾಯವಾಗಿದೆ' ಎಂದು ಹೇಳಿದರು.

ಸಾಂಸ್ಕೃತಿಕ ಸಂಭ್ರಮದಲ್ಲಿ ದೇಶದ ವಿವಿಧ ವಿಶ್ವವಿದ್ಯಾಲಯಗಳ ಎರಡು ಸಾವಿರ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಅನುಸಂಧಾನ ಪರಿಷತ್ ಉಪ ಮಹಾ ನಿರ್ದೇಶಕ ಆರ್.ಸಿ.ಅಗರವಾಲ್, ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಸಿ.ಕಳಸದ, ಕುಲಪತಿ ಎಸ್.ವಿ.ಸುರೇಶ ಇದ್ದರು.

VijayaKarnataka Pg- 4

### 21ನೇ ಅಂತರ–ಕೃಷಿ ವಿವಿಗಳ ಯುವಜನೋತ್ಸವದಲ್ಲಿ ಕೇಂದ್ರ ಸಚಿವ ತೋಮರ್ ಮನವಿ

# ಅಧಿಕ ಉತ್ಪಾದನೆಗೆ ಹೊಸ ತಂತ್ರಜ್ಞಾನ ಬಳಸಿ

■ ವಿಕ ಸುದ್ದಿಲೋಕ ಬೆಂಗಳೂರು

ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಕೃಷಿ ಚಟುವಟಿಕೆಗಳಿಗೆ ಒತ್ತು ನೀಡುವ ಮೂಲಕ 2050ರ ಹೊತ್ತಿಗೆ ಭಾರತವು ಇಡೀ ವಿಶ್ವಕ್ಕೆ ಆಹಾರ ಪೂರೈಕೆ ಮಾಡುವಂತಾಗಬೇಕು ಎಂದು ಕೇಂದ್ರ ಕೃಷಿ ಮತ್ತು ಕೃಷಿಕರ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ರೈತರಿಗೆ ಕರೆ ನೀಡಿದರು.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ 21ನೇ ಅಖಿಲ ಭಾರತ ಅಂತರ್ ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವ (ಅಗ್ರಿ ಯುನಿಫೆಸ್ಟ್ 2022–23) ಮತ್ತು ಚತುರ ಕೃಷಿ ಅಭಿವೃದ್ಧಿ ಮತ್ತು ನಾವೀನ್ಯತಾ ಯೋಜನೆಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

''ಭಾರತವು ಈಗಾಗಲೇ ನೈಸರ್ಗಿಕ ವಿಪತ್ತು ಇನ್ನಿತರ ಸಂಕಷ್ಟದಲ್ಲಿರುವ ದೇಶಗಳಿಗೆ ಆಹಾರ ಪೂರೈಕೆ ಮಾಡುತ್ತಿದೆ. ಕಡಿಮೆ ಭೂಮಿಯಲ್ಲಿ ಕಡಿಮೆ ನೀರು ಬಳಸಿ, ಮಿತ ವೆಚ್ಚದ ಮೂಲಕ ಹೆಚ್ಚಿನ ಫಸಲು ಪಡೆಯುವ ಪ್ರಯತ್ನಗಳು ಮುಂದಿನ ದಿನಗಳಲ್ಲಿ ಮಹತ್ವ ಪಡೆಯಲಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸಂಶೋಧನೆಗಳನ್ನು ನಡೆಸಬೇಕು,'' ಎಂದು ಅವರು ಸಲಹೆ ಮಾಡಿದರು. ''ವಿವಿಯು ಆಯೋಜಿಸಿರುವ ಯುವಜನೋತ್ಸವವು ಭಾರತದ ಸಾಂಸ್ಕೃತಿಕ ಸ್ವರೂಪವನ್ನು ಬಿಂಬಿಸುತ್ತದೆ. ಏಕಾತ್ಮಕತೆ ಮತ್ತು ಸಾಮರಸ್ಯ ಭಾರತೀಯ ಸಂಸ್ಕೃತಿಯ ಶ್ರೇಷ್ಠ ಅಂಶವಾಗಿದೆ,''



ಬೆಂಗಳೂರಿನಲ್ಲಿ ಕೃಷಿ ವಿವಿಗಳ ಯುವಜನೋತ್ಸವವನ್ನು ಡ್ರಮ್ ಬಾರಿಸಿ ಕೇಂದ್ರ ಸಚಿವ ತೋಮರ್ ಹಾಗೂ ರಾಜ್ಯ ಕೃಷಿ ಸಚಿವ ಬಿ.ಸಿ.ಪಾಟೀಲ್, ಸಹಾಯಕ ಕೃಷಿ ಸಚಿವೆ ಶೋಭಾ ಉದ್ಘಾಟಿಸಿದರು.

ಎಂದು ವ್ಯಾಖ್ಯಾನಿಸಿದ ಅವರು, ''ಯುವಜನೋತ್ಸವವು 59 ಕೃಷಿ ಸಂಬಂಧಿತ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಪ್ರದರ್ಶಿಸಲು ವೇದಿಕೆಯಾಗಿದೆ. ಐದು ದಿನಗಳ ಸಾಂಸ್ಕೃತಿಕ ಹಬ್ಬದಲ್ಲಿ ನಾನಾ ರಾಜ್ಯಗಳ ಎರಡು ಸಾವಿರ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿದೆ,'' ಎಂದು ಶ್ಲಾಘಿಸಿದರು.

ರಾಜ್ಯ ಕೃಷಿ ಸಚಿವ ಬಿ.ಸಿ. ಪಾಟೀಲ್ ಮಾತನಾಡಿ, ''ಈ ಯುವಜನೋತ್ಸವವು ನಮ್ಮ ಸಂಸ್ಕೃತಿಗೆ ಹಿಡಿದ ಕೈಗನ್ನಡಿಯಾಗಿದೆ. ಕರ್ನಾಟಕದಲ್ಲಿ 10 ಭೌಗೋಳಿಕ ಹವಾಮಾನ ವಲಯಗಳಿದ್ದು ಕೃಷಿ ಚಟುವಟಿಕೆಯ ಜತೆಗೆ ಅಲ್ಲಿನ ಸಂಸ್ಕೃತಿಯಲ್ಲಿಯೂ ಭಿನ್ನತೆಯಿದೆ. ಯಕ್ಷಗಾನ, ಡೊಳ್ಳುಕುಣಿತ, ಕಂಸಾಳೆ ನಮ್ಮ ಹಳ್ಳಿಗಾಡಿನ ಸಾಂಸ್ಕೃತಿಕ ಕಲೆಯನ್ನು ಬಿಂಬಿಸುತ್ತದೆ. ಇಂತಹ ಆಚರಣೆಗಳು ವ್ಯಕ್ತಿಯು ಸಮಗ್ರ ವಿಕಾಸವಾಗಲು ಸಹಾಯವಾಗುತ್ತದೆ,'' ಎಂದು ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ್ ಮಾತನಾಡಿ, ''ಯುವಜನೋತ್ಸವವು ನಾನಾ ಭಾರತೀಯ ಸಂಸ್ಕೃತಿಗಳನ್ನು ಸಂಪರ್ಕಿಸುವ ಮೂಲಕ ಭಾರತೀಯ ಕೃಷಿಯನ್ನು ಸಂಯೋಜಿಸುವ ದೃಷ್ಟಿಯೊಂದಿಗೆ ಕೃಷಿ ವಿವಿಗಳ ಯುವಕರಲ್ಲಿನ ಪ್ರತಿಭೆ ಬಳಸಿಕೊಳ್ಳಲು ಮತ್ತು ಭಾರತೀಯ ಸಾಂಸ್ಕೃತಿಕ ಸೌಂದರ್ಯವನ್ನು ಬಿಂಬಿಸುತ್ತದೆ,'' ಎಂದರು.

'ಚತುರ ಕೃಷಿ ಅಭಿವೃದ್ಧಿ ಮತ್ತು ನಾವೀನ್ಯತಾ' ಯೋಜನೆಯ ರೂವಾರಿ ಹೆಕ್ಸಾಗನ್‌ನ ಹಿರಿಯ ನಿರ್ದೇಶಕ ಶಾಜೀ ಕೋಝುಕುನ್ನೆನ್ ಮಾತನಾಡಿ, ''ಕೃಷಿಯಲ್ಲಿ ಪಾಲುದಾರರ ಅನುಕೂಲಕ್ಕಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ ದೇಶದಲ್ಲೇ ಮೊದಲ ಬಾರಿಗೆ ಈ ಚತುರ ಕೃಷಿ ಅಭಿವೃದ್ಧಿ ಮತ್ತು ನಾವೀನ್ಯತಾ ಯೋಜನೆ ಜಾರಿಗೊಳಿಸುತ್ತಿದ್ದೇವೆ. ಇದು ಒಟ್ಟು 110 ಕೋಟಿ ರೂ.ಗಳ ಯೋಜನೆಯಾಗಿದ್ದು, 93.5 ಕೋಟಿ ರೂ. ಹೆಕ್ಸಾಗನ್ ಭರಿಸಲಿದ್ದು ಉಳಿದ 16.5 ಕೋಟಿ ರೂ.ಗಳನ್ನು ರಾಜ್ಯ ಸರಕಾರ ಭರಿಸಲಿದೆ,'' ಎಂದರು.

ಕೇಂದ್ರ ಕೃಷಿ ಖಾತೆಯ ಸಹಾಯಕ ಸಚಿವೆ ಶೋಭಾ ಕರಂದ್ಲಾಜೆ, ಭಾರತೀಯ ಕೃಷಿ ಸಂಶೋಧನಾ ಪರಿಷತ್‌ನ ಉಪ ಮಹಾನಿರ್ದೇಶಕ (ಕೃಷಿ ಶಿಕ್ಷಣ) ಡಾ. ಆರ್.ಸಿ. ಅಗರವಾಲ್, ರಾಜ್ಯ ಕೃಷಿ ಇಲಾಖೆಯ ಕಾರ್ಯದರ್ಶಿ ಶಿವಯೋಗಿ ಸಿ. ಕಳಸದ ಉಪಸ್ಥಿತರಿದ್ದರು.

ಇದೇ ವೇಳೆ ಅತಿಥಿಗಳು ವೇದಿಕೆಯ ಮೇಲೆ ಡ್ರಮ್ಸ್ ಬಾರಿಸುವ ಮೂಲಕ ಸಭಾಂಗಣದ ಗಮನ ಸೆಳೆದರು.

Vijayavani Pg- 2 Spl

# ಟೆಕ್‌ನಿಂದ ರೈತರ ಆದಾಯ ವೃದ್ಧಿ

## ಚತುರ ಕೃಷಿ, ನಾವೀನ್ಯತಾ ಯೋಜನೆಗೆ ಚಾಲನೆ | ನರೇಂದ್ರಸಿಂಗ್ ತೋಮರ್ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರೈತರು ಕೃಷಿ ಚಟುವಟಿಕೆಗಳಲ್ಲಿ ನವೀನ ತಂತ್ರಜ್ಞಾನ ಅಳವಡಿಸಿಕೊಂಡಲ್ಲಿ ಹೆಚ್ಚಿನ ಆದಾಯ ವೃದ್ಧಿಸಿಕೊಳ್ಳಬಹುದು ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ.

ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಬುಧವಾರ ಆಯೋಜಿಸಿದ್ದ 'ಚತುರ ಕೃಷಿ ಅಭಿವೃದ್ಧಿ ಹಾಗೂ ನಾವೀನ್ಯತೆ' ಯೋಜನೆಗೆ ಚಾಲನೆ ಹಾಗೂ 21ನೇ ಅಖಿಲ ಭಾರತ ಅಂತರ ಕೃಷಿ ವಿವಿಗಳ ಯುವಜನೋತ್ಸವ 'ಅಗ್ರಿ ಯೂನಿಫೆಸ್ಟ್' ಉದ್ಘಾಟಿಸಿ ಮಾತನಾಡಿದರು.

ಕರೊನಾ ಸಂದರ್ಭದಲ್ಲಿ ಇತರ ಕ್ಷೇತ್ರಗಳು ಸ್ಥಗಿತಗೊಂಡು ಹಿಮ್ಮುಖ ಅಭಿವೃದ್ಧಿ ಕಂಡಿತ್ತು. ಆದರೆ, ಕೃಷಿ ವಲಯ ಮಾತ್ರ ಎಂದಿನಂತೆ ತನ್ನ ಕಾರ್ಯಚಟುವಟಿಕೆಯಲ್ಲಿ ತೊಡಗಿಸಿಕೊಂಡಿತ್ತು. ಈಗ ದೇಶದ ಜಿಡಿಪಿಗೆ ಕೃಷಿಯಿಂದ ಹೆಚ್ಚಿನ ಕೊಡುಗೆ ನೀಡಬೇಕಿದ್ದು, ರೈತ ಸಮುದಾಯ ತಂತ್ರಜ್ಞಾನದ ಮೂಲಕ ಹೆಚ್ಚಿನ ಸಾಧನೆ ಮಾಡಬೇಕಿದೆ ಎಂದರು.

ಕೇಂದ್ರ ಸರ್ಕಾರ ಡಿಜಿಟಲ್ ಸೌಲಭ್ಯಗಳ ಬಳಕೆಗೆ ಉತ್ತೇಜನ ನೀಡಿದ ಬಳಿಕ ಭಾರತ ಇತರ ರಾಷ್ಟ್ರಗಳೊಂದಿಗೆ ಪೈಪೋಟಿ ನೀಡಲು ಸಾಧ್ಯವಾಗಿದೆ. ನೇರ ನಗದು ವರ್ಗಾವಣೆ ಯೋಜನೆಯಿಂದ (ಡಿಬಿಟಿ) ಪಿಎಂ ಕಿಸಾನ್ ಸಮ್ಮಾನ್ ಈವರೆಗೆ ರೈತರ ಬ್ಯಾಂಕ್ ಖಾತೆಗೆ 2.40 ಲಕ್ಷ ಕೋಟಿ ರೂ. ಜಮೆ ಮಾಡಲಾಗಿದೆ. ಇದರಿಂದ ಸರ್ಕಾರದ ಪೂರ್ಣ ಸಬ್ಸಿಡಿ ಹಣ ರೈತರಿಗೆ ತಲುಪಿದಂತಾಗಿದೆ. ಇಂತಹ ಸಕಾರಾತ್ಮಕ ಬದಲಾವಣೆಯಿಂದ ದೇಶದ ಪ್ರಗತಿ ಇನ್ನಷ್ಟು ಎತ್ತರಕ್ಕೆ ಏರಬೇಕಿದೆ ಎಂದು ತಿಳಿಸಿದರು.

**383 ಕೋಟಿ ರೂ. ಜಮೆ:** ದೇಶದಲ್ಲೇ ಮೊದಲ ಬಾರಿಗೆ ರೈತ ಮಕ್ಕಳಿಗೆ ಜಾರಿಗೆ ತಂದಿರುವ ರೈತ ವಿದ್ಯಾನಿಧಿ ಯೋಜನೆ ಲಕ್ಷಾಂತರ ಸಂಖ್ಯೆ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲ ಕಲ್ಪಿಸಿದೆ. ಇದನ್ನಾಧರಿಸಿ ಇತರ ವರ್ಗದ ಮಕ್ಕಳಿಗೂ ಯೋಜನೆ ವಿಸ್ತರಿಸಲಾಗಿದೆ. ಇತ್ತೀಚಿಗಷ್ಟೇ ಚಾಲನೆಗೊಂಡ ಡೀಸೆಲ್ ಸಬ್ಸಿಡಿ ಯೋಜನೆಯಡಿ ರೈತರ ಖಾತೆಗೆ 383 ಕೋಟಿ ರೂ. ಡಿಬಿಟಿ ಮಾಡಲಾಗಿದೆ. ಕೃಷಿ ವಿವಿಗಳಲ್ಲಿ ರೈತರ ಮಕ್ಕಳಿಗೆ ಶೇ.50 ಸೀಟುಗಳನ್ನು ಮೀಸಲಿಡುವ ಮೂಲಕ ಗ್ರಾಮೀಣರು ಕೃಷಿ ಪದವಿ ಪಡೆಯಲು ಹೆಚ್ಚಿನ ಅನುಕೂಲ ಆಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಐಸಿಎಆರ್ ಉಪ ಮಹಾನಿರ್ದೇಶಕ (ಕೃಷಿ ಶಿಕ್ಷಣ) ಡಾ.ಆರ್.ಸಿ. ಅಗರವಾಲ್, ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ವಿ. ಸುರೇಶ, ಡಾ. ಕೆ.ಸಿ.ನಾರಾಯಣ ಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.



ವಿಜಯವಾಣಿ ಚಿತ್ರ

ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಬುಧವಾರ ಆಯೋಜಿಸಿದ್ದ 'ಚತುರ ಕೃಷಿ ಅಭಿವೃದ್ಧಿ ಹಾಗೂ ನಾವೀನ್ಯತಾ' ಯೋಜನೆ ಮತ್ತು 'ಅಗ್ರಿ ಯೂನಿಫೆಸ್ಟ್' ಯುವಜನೋತ್ಸವ ಉದ್ಘಾಟನೆಯನ್ನು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ನೆರವೇರಿಸಿದರು. ಸಚಿವರಾದ ಶೋಭಾ ಕರಂದ್ಲಾಜೆ, ಬಿ.ಸಿ.ಪಾಟೀಲ್, ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಮತ್ತಿತರರಿದ್ದರು.

### ಸಿಡ್ಟಾ ಯೋಜನೆಗೆ ₹110 ಕೋಟಿ ವೆಚ್ಚ

ಚತುರ ಕೃಷಿ ಅಭಿವೃದ್ಧಿ ಹಾಗೂ ನಾವೀನ್ಯತಾ ಯೋಜನೆ (ಸಿಡ್ಟಾ) ಸಹಭಾಗಿತ್ವ, ಬಹುಶಿಸ್ತೀಯ ಮತ್ತು ಪ್ರಾಯೋಗಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಗುರಿ ಹೊಂದಿದೆ. ಈ ಕೇಂದ್ರವು ಮೂಲಭೂತ ಕಲಿಕೆಯನ್ನು ಉತ್ತೇಜಿಸುವುದರೊಂದಿಗೆ ಕೃಷಿ ವಿಧಾನ ಹಾಗೂ ಪದ್ಧತಿಗಳ ಕುರಿತಾದ ಇತ್ತೀಚಿನ ತಾಂತ್ರಿಕ ಪ್ರಗತಿಗಳ ಕುರಿತು ವಿವರವಾದ ತಿಳಿವಳಿಕೆ ಹಾಗೂ ಅನುಭವವನ್ನು ಒದಗಿಸುತ್ತದೆ. ಜತೆಗೆ ತಂತ್ರಜ್ಞಾನ ಪ್ರಾತ್ಯಕ್ಷಿಕೆ, ಡಿಜಿಟಲ್ ಕಲಿಕೆ, ಉದ್ಯಮ ಮಾನ್ಯತೆ ಪಡೆದ ಕೋರ್ಸ್‌ಗಳು ಹಾಗೂ ಪ್ರಮಾಣ ಪತ್ರಗಳ ವಿತರಣೆ, ಉದ್ಯಮ ಪಾಲುದಾರರೊಂದಿಗೆ ಭಾಗಿತ್ವವನ್ನು ಸ್ಥಾಪಿಸುವ ಆಶಯವನ್ನು ಹೊಂದಲಾಗಿದೆ. ಈ ಯೋಜನೆ ಜಾರಿಗೆ 110 ಕೋಟಿ ರೂ. ವೆಚ್ಚ ಮಾಡಲಿದ್ದು, ರಾಜ್ಯ ಸರ್ಕಾರ 16 ಕೋಟಿ ರೂ. ಅನುದಾನ ಒದಗಿಸಲಿದೆ.

Udayavani Pg- 4

# 2050ಕ್ಕೆ ಭಾರತದಿಂದ ವಿಶ್ವಕ್ಕೆ ಆಹಾರ ಪೂರೈಕೆ

## ವಿವಿ ಅಗ್ರಿ ಯುನಿಫೆಸ್ಟ್ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಸಚಿವ ತೋಮರ್ ಭರವಸೆ

**ಬೆಂಗಳೂರು:** ಭಾರತವು ಈಗಾಗಲೇ ನೈಸರ್ಗಿಕ ವಿಪತ್ತು ಅಥವಾ ಇನ್ನಿತರ ಸಂಕಷ್ಟಗಳಿಗೆ ಸಿಲುಕಿರುವ ದೇಶಗಳಿಗೆ ಆಹಾರ ಪೂರೈಸುತ್ತಿದೆ. ಆದರೆ 2050ರ ಹೊತ್ತಿಗೆ ಭಾರತವು ಇಡೀ ವಿಶ್ವಕ್ಕೆ ಆಹಾರ ಪೂರೈಸುವ ಮಟ್ಟಕ್ಕೆ ಏರಬೇಕು. ಇದಕ್ಕಾಗಿ ಈಗಿನಿಂದಲೇ ತಯಾರಿ ನಡೆಸುವುದು ಅಗತ್ಯ ಎಂದು ಕೇಂದ್ರದ ಕೃಷಿ ಮತ್ತು ಕೃಷಿಕರ ಕಲ್ಯಾಣ ಸಚಿವ ನರೇಂದರ್ ಸಿಂಗ್ ತೋಮರ್ ಹೇಳಿದ್ದಾರೆ.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ 21ನೇ ಅಖಿಲ ಭಾರತ ಅಂತರ-ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವ 2022-23 (ಅಗ್ರಿ ಯುನಿಫೆಸ್ಟ್ 2022-23) ಮತ್ತು ಚತುರ ಕೃಷಿ ಅಭಿವೃದ್ಧಿ ಮತ್ತು ನಾವೀನ್ಯತಾ ಯೋಜನೆಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ಜನಸಂಖ್ಯೆಯ ಶೇ. 60 ಯುವ ಸಮುದಾಯವಾಗಿದ್ದು 2047ರ ಹೊತ್ತಿಗೆ ದೇಶ ಪರಮ ವೈಭವದ ಹಂತಕ್ಕೆ ತಲುಪುವಲ್ಲಿ ಯುವ ಸಮೂಹ ಮತ್ತು ಕೃಷಿ ಚಟುವಟಿಕೆಗಳೆರಡು ಅತ್ಯಂತ ಪ್ರಮುಖ ಪಾತ್ರವಹಿಸಲಿದೆ. ಯುವಕರು ಕೃಷಿ ಸಂಬಂಧಿ ಚಟುವಟಿಕೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳುವ ಮೂಲಕ ಬಲಿಷ್ಠ ಭಾರತ ನಿರ್ಮಾಣದಲ್ಲಿ ಪ್ರಮುಖ ಭೂಮಿಕೆ ನಿಭಾಯಿಸಬೇಕು ಎಂದು ಅವರು ಕರೆ ನೀಡಿದರು.

ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡರೆ ಕೃಷಿ ಸರಳವಾಗುವುದರ ಜೊತೆ ಹೆಚ್ಚಿನ ಲಾಭ ದೊರೆಯಲಿದೆ. ತಂತ್ರಜ್ಞಾನ ಒಂದೆಡೆ ರೈತರಿಗೆ ಕೃಷಿ ಚಟುವಟಿಕೆಗಳನ್ನು ಸುಗಮಗೊಳಿಸಿದರೆ ಮತ್ತೊಂದೆಡೆ ಸರ್ಕಾರಕ್ಕೆ ತನ್ನ ಯೋಜನೆಗಳಲ್ಲಿ ಪಾರದರ್ಶಕತೆ ತರಲು ನೆರವಾಗುತ್ತದೆ. ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 11.50 ಕೋಟಿ ರೈತರಿಗೆ 2.40 ಕೋಟಿ ಲಕ್ಷ ರೂ. ಗಳನ್ನು ಒಂದೇ ಒಂದು ಪೈಸೆ ಸೋರಿಕೆಯಾಗದಂತೆ ರೈತರಿಗೆ ತಲುಪಿಸಿರುವುದು ಇದಕ್ಕೆ ಉದಾಹರಣೆ ಎಂದು ಕೇಂದ್ರ ಕೃಷಿ ಸಚಿವರು ಹೇಳಿದರು.

ಯುವಜನೋತ್ಸವವು 57 ಕೃಷಿ ಸಂಬಂಧಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆಯಾಗಿದೆ. 5 ದಿನಗಳ ಸಾಂಸ್ಕೃತಿಕ ಹಬ್ಬದಲ್ಲಿ ವಿವಿಧ ರಾಜ್ಯಗಳ 2 ಸಾವಿರ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿದೆ ಎಂದು ಶ್ಲಾಘಿಸಿದರು.

ರಾಜ್ಯದ ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ಕರ್ನಾಟಕ ಸರ್ಕಾರ ಕೃಷಿ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿದ್ದು ಕೃಷಿಯಲ್ಲಿ ಶೇ.1ರಷ್ಟು ಪ್ರಗತಿ ಸಾಧಿಸಿದರೆ ಕೈಗಾರಿಕೆಯಲ್ಲಿ ಶೇ.7ರಷ್ಟು ಸೇವಾ ಕ್ಷೇತ್ರದಲ್ಲಿ ಶೇ.20ರಷ್ಟು ಪ್ರಗತಿ ಸಾಧಿಸಿದಂತೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಭಾರತೀಯ ಕೃಷಿ ಸಂಶೋಧನಾ ಪರಿಷತ್‌ನ ಉಪ ಮಹಾನಿರ್ದೇಶಕ (ಕೃಷಿ ಶಿಕ್ಷಣ) ಡಾ.ಆರ್.ಸಿ. ಅಗರವಾಲ್, ರಾಜ್ಯ ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಸಿ. ಕಳಸದ, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.



ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಚತುರ ಕೃಷಿ ಅಭಿವೃದ್ಧಿ ಮತ್ತು ನಾವೀನ್ಯತಾ ಕಾರ್ಯಕ್ರಮವನ್ನು ಕೇಂದ್ರ ಕೃಷಿ ಸಚಿವ ನರೇಂದರ್ ಸಿಂಗ್ ತೋಮರ್ ಉದ್ಘಾಟಿಸಿದರು.

### ದೇಶದಲ್ಲೇ ಮೊದಲ ಬಾರಿಗೆ ಯೋಜನೆ

'ಚತುರ ಕೃಷಿ ಅಭಿವೃದ್ಧಿ ಮತ್ತು ನಾವೀನ್ಯತಾ' ಯೋಜನೆಯ ರೂವಾರಿ ಹೆಕ್ಸಾಗನ್‌ನ ಹಿರಿಯ ನಿರ್ದೇಶಕ ಶಾಜೀ ಕೋಝುಕುನ್ನನ್ ಮಾತನಾಡಿ, ಕೃಷಿಯಲ್ಲಿ ಪಾಲುದಾರರ ಅನುಕೂಲಕ್ಕಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ ದೇಶದಲ್ಲೇ ಮೊದಲ ಬಾರಿಗೆ ಈ ಯೋಜನೆ ಜಾರಿಗೊಳಿಸುತ್ತಿದ್ದೇವೆ. ಈ ಯೋಜನೆಯು ಸಹಭಾಗಿತ್ವ ಬಹುಶಿಸ್ತೀಯ ಮತ್ತು ಪ್ರಾಯೋಗಿಕ ಕಾರ್ಯಕ್ರಮಗಳು ಆಯೋಜಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ಕೇಂದ್ರವು ಮೂಲಭೂತ ಕಲಿಕೆಯನ್ನು ಉತ್ತೇಜಿಸುವುದರೊಂದಿಗೆ ಕೃಷಿ ವಿಧಾನ ಮತ್ತು ಪದ್ಧತಿಗಳ ಕುರಿತಾದ ಇತ್ತೀಚಿನ ತಾಂತ್ರಿಕ ಪ್ರಗತಿಗಳ ಬಗ್ಗೆ ವಿವರವಾದ ತಿಳಿವಳಿಕೆ ಮತ್ತು ಅನುಭವವನ್ನು ಒದಗಿಸುತ್ತದೆ. ಇದು ಒಟ್ಟು 110 ಕೋಟಿ ರೂ.ಗಳ ಯೋಜನೆಯಾಗಿದ್ದು 93.5 ಕೋಟಿ ರೂ ಹೆಕ್ಸಾಗನ್ ಭರಿಸಲಿದ್ದು ಉಳಿದ 16.5 ಕೋಟಿ ರೂಗಳನ್ನು ರಾಜ್ಯ ಸರ್ಕಾರ ಭರಿಸಲಿದೆ ಎಂದರು.

Samyuktha Karnataka Pg- 3

# ಹೊಸ ತಂತ್ರಜ್ಞಾನದಿಂದ ಕೃಷಿ ಸರಳ–ಲಾಭ

ಬೆಂಗಳೂರು: ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡರೆ ಕೃಷಿ ಸರಳವಾಗುವುದರ ಜತೆ ಹೆಚ್ಚಿನ ಲಾಭ ದೊರೆಯಲಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಏರ್ಪಡಿಸಿದ್ದ 21ನೇ ಅಖಿಲ ಭಾರತ ಅಂತರ–ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಿಜಿಟಲ್ ತಂತ್ರಜ್ಞಾನದ ಮೂಲಕ ಆರ್ಥಿಕ ಸೇರಿಕೆಯನ್ನು ತಡೆಗಟ್ಟಬಹುದಾಗಿದೆ. ಶತಮಾನ ಪೂರೈಸುವುದರೊಳಗೆ ನಮ್ಮ ದೇಶವು ಜಗತ್ತಿನಲ್ಲಿಯೇ ಸಶಕ್ತ ರಾಷ್ಟ್ರವಾಗಿ ಹೊರಹೊಮ್ಮಬೇಕಾಗಿದೆ ಎಂದರು.

ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ರಾಜ್ಯ ಸರ್ಕಾರ ಕೃಷಿ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿದ್ದು ಕೃಷಿಯಲ್ಲಿ ಶೇ.1ರಷ್ಟು ಪ್ರಗತಿ ಸಾಧಿಸಿದರೆ ಕೈಗಾರಿಕೆಯಲ್ಲಿ ಶೇ.7ರಷ್ಟು, ಸೇವಾ ಕ್ಷೇತ್ರದಲ್ಲಿ ಶೇ.20ರಷ್ಟು ಪ್ರಗತಿ ಸಾಧಿಸಿದಂತೆ ಎಂದು ಹೇಳಿದರು.

ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ರೈತರ ಮಕ್ಕಳಿಗೆ ಶೇ.40 ರಷ್ಟಿದ್ದ ಮೀಸಲಾತಿ ಪ್ರಮಾಣವನ್ನು ಶೇ.50ಕ್ಕೆ ಹೆಚ್ಚಿಸಿರುವುದರಿಂದ ಹೆಚ್ಚಿನ ಸಂಖ್ಯೆಯ ರೈತರ ಮಕ್ಕಳು ಕೃಷಿ ಶಿಕ್ಷಣವನ್ನು ಪಡೆಯಲು



ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಏರ್ಪಡಿಸಿದ್ದ 21ನೇ ಅಖಿಲ ಭಾರತ ಅಂತರ–ಕೃಷಿ ವಿಶ್ವವಿದ್ಯಾಲಯಗಳ ಯುವಜನೋತ್ಸವವನ್ನು ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ಉದ್ಘಾಟಿಸಿದರು.

ಸಹಾಯವಾಗಿದೆ. ರೈತ ಸಿರಿ ವಿದ್ಯಾನಿಧಿ ವಿದ್ಯಾರ್ಥಿ ವೇತನವನ್ನು ರೈತರ ಮಕ್ಕಳಿಗೆ ನೀಡಿ ರೈತ ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ತಿಳಿಸಿದರು.

ಹೆಕ್ಸಗನ್ ಹಿರಿಯ ನಿರ್ದೇಶಕ ಶಾಜೀ ಕೋಝುಕುನ್ನನ್ ಮಾತನಾಡಿ, ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಕೃಷಿ ಪಾಲುದಾರರಿಗೆ ಅನುಕೂಲ ಮಾಡಿಕೊಡಲು ಕೃಷಿ ಅಭಿವೃದ್ಧಿ ಮತ್ತು ನಾವೀನ್ಯತಾ ಯೋಜನೆಯನ್ನು ರಾಷ್ಟ್ರದಲ್ಲಿ ಮೊದಲ ಬಾರಿಗೆ ಆರಂಭಿಸಲಾಗಿದೆ. ಈ ಯೋಜನೆಯ ಒಟ್ಟು ವೆಚ್ಚ ರೂ.110 ಕೋಟಿ ರೂ ಇದೆ. ಹೆಕ್ಸಾಗಾನ್ 93.5 ಕೋಟಿ ರೂ. ಅನುದಾನ ನೀಡಲಿದೆ. ಉಳಿದ ಅನುದಾನ 16.5 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ನೀಡಲಿದೆ ಎಂದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೇಂದ್ರದ ಕೃಷಿ ಶಿಕ್ಷಣ


ಒಂದೇ ಸೂರಿನಡಿ ಎಲ್ಲಾ ಭಾರತೀಯ ಸಾಂಸ್ಕೃತಿಕ ಉತ್ಸವಗಳ ಸಂಯೋಜನೆಯಾಗಿದ್ದು 57 ಕೃಷಿ ಸಂಬಂಧಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆಯಾಗಿದೆ.

■ ನರೇಂದ್ರಸಿಂಗ್ ತೋಮರ್
| ಕೇಂದ್ರ ಕೃಷಿ ಸಚಿವ

ಇಲಾಖೆಯ ಮಹಾ ನಿರ್ದೇಶಕ ಡಾ.ಆರ್.ಸಿ.ಅಗರ್‌ವಾಲ್, ಕೃಷಿ ಕಾರ್ಯದರ್ಶಿ ಶಿವಯೋಗಿ ಸಿ.ಕಳಸದ, ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್ ಮತ್ತಿತರರಿದ್ದರು.

IN THE COURT OF THE 39th ADDL. CITY CIVIL JUDGE AT BANGALORE (CCCH-40)
O.S. No.1021/2013
Between: Sri. K. Nagalingappa, S/o. Late. Pakirappa, aged about 54 years, R/at #4, 2nd Floor, Sujatha Complex, 1st Cross, Gandhinagar, Bengaluru-560009. ... Plaintiff
AND: Sri. Chiranth ... Defendant
To, Sri. Chiranth, S/o. Late Venkatesh, R/at. "Ramaiah Konaghatta", Marenahalli Village, Konnur Post, Jaala Hobli, Bengaluru North Taluk,

# 2050ಕ್ಕೆ ಇಡೀ ವಿಶ್ವಕ್ಕೆ ಆಹಾರ ಪೂರೈಸುವ ಮಟ್ಟಕ್ಕೆ ಭಾರತ



**ಬೆಂಗಳೂರು:** ಭಾರತವು 2050ರ ಹೊತ್ತಿಗೆ ಇಡೀ ವಿಶ್ವಕ್ಕೆ ಆಹಾರ ಪೂರೈಸುವ ಮಟ್ಟಕ್ಕೆ ತಲುಪಬೇಕು, ಅದಕ್ಕಾಗಿ ಈಗಿನಿಂದಲೇ ತಯಾರಿ ಮಾಡಬೇಕು ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಕರೆ ನೀಡಿದರು.

ಜಿಕೆವಿಕೆ ಕೃಷಿ ವಿಶ್ವವಿದ್ಯಾಲಯ ವತಿಯಿಂದ ಬುಧವಾರ ಜಿಕೆವಿಕೆ ಆವರಣದ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಹಮ್ಮಿಕೊಂಡ 21ನೇ ಅಖಿಲ ಭಾರತ ಅಂತರ ಕೃಷಿ ವಿಶ್ವವಿದ್ಯಾಲಯಗಳ ಯುವ ಜನೋತ್ಸವ ಕಾರ್ಯಕ್ರಮ ಉದ್ಘಾಟಿಸಿಅವರುಮಾತನಾಡಿದರು. ಭಾರತವು ಈಗಾಗಲೇ ನೈಸರ್ಗಿಕ ವಿಪತ್ತು ಅಥವಾ ಇನ್ನಿತರ ಸಂಕಷ್ಟಗಳಿಗೆ ಈಡಾಗಿರುವ ದೇಶಗಳಿಗೆ ಆಹಾರ ಪೂರೈಕೆ ಮಾಡುತ್ತಿದೆ. ಆದರೆ ಭಾರತವು 2050ರ ಹೊತ್ತಿಗೆ ಇಡೀ ವಿಶ್ವಕ್ಕೆ ಆಹಾರ ಪೂರೈಸುವ ಮಟ್ಟಕ್ಕೆ ತಲುಪಬೇಕು, ಅದಕ್ಕಾಗಿ ಈಗಿನಿಂದಲೇ ತಯಾರಿ ಮಾಡಬೇಕು ಎಂದರು.

ನಾವುಅಮೃತಮಹೋತ್ಸವದಸಂಭ್ರಮದಲ್ಲಿದ್ದೇವೆ, ಇನ್ನೂ ಶತಮಾನ ಪೂರೈಸುವುದರೊಳಗೆ ನಮ್ಮ ದೇಶವು ಜಗತ್ತಿನಲ್ಲಿಯೇ ಸಶಕ್ತ ರಾಷ್ಟ್ರವಾಗಿ ಹೊರಹೊಮ್ಮಬೇಕಾಗಿದೆ. ಇದಕ್ಕಾಗಿ ನಮ್ಮ ದೇಶದಲ್ಲಿನ ಶೇ.60ರಷ್ಟು ಯುವ ಸಮೂಹದವರನ್ನು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನ ಹೆಚ್ಚು ಆಗಬೇಕು ಎಂದರು.

ಕಡಿಮೆ ಭೂಮಿಯಲ್ಲಿ, ಕಡಿಮೆ ನೀರಿನಲ್ಲಿ ಹೆಚ್ಚು ಆದಾಯಗಳಿಸಲು ಹೆಚ್ಚಿನ ಆದ್ಯತೆ ನೀಡಬೇಕು. ಅದಕ್ಕಾಗಿ ಹೆಚ್ಚಿನ ಸಂಶೋಧನೆ ನಡೆಸಬೇಕು. ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡರೆ ಕೃಷಿ ಸರಳವಾಗುವುದರ ಜೊತೆ ಹೆಚ್ಚಿನ ಲಾಭ ದೊರೆಯಲಿದೆ ಎಂದರು. ಕೇಂದ್ರ ಸರ್ಕಾರಕ್ಕೆ ತನ್ನ ಯೋಜನೆಗಳಲ್ಲಿ ಪಾರದರ್ಶಕತೆ ತರಲು ನೆರವಾಗುತ್ತದೆ. ಅದಕ್ಕೆ ಕೃಷಿ ಸನ್ಮಾನ್ ಯೋಜನೆ 2.40 ಲಕ್ಷ ಕೋಟಿ ರೂ.ಗಳನ್ನು ಸೋರಿಕೆಯಾಗದಂತೆ ಅರ್ಹ ಫಲಾನುಭವಿಗಳಿಗೆ ನೀಡಿರುವುದು ಸಾಕ್ಷಿ ಎಂದರು. ಕೃಷಿ ಸಚಿವ ಬಿ.ಸಿ.ಪಾಟೀಲ್, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಶಿಕ್ಷಣ ಉಪ ನಿರ್ದೇಶಕ ಡಾ.ಆರ್.ಸಿ ಅಗರವಾಲ್, ಕಾರ್ಯದರ್ಶಿ ಶಿವಯೋಗಿ ಇದ್ದರು.


Hosadigantha Pg-9

Hosadigantha Pg-10

### ದಿಢೀರನೆ ಕೆಜಿಗೆ 50 ರಿಂದ 60 ರೂ. ಹೆಚ್ಚಳ | ವ್ಯಾಪಾರಸ್ಥರಿಗೂ ಪರದಾಟ

# ಹುಣಸೆಹಣ್ಣು ಸಂಗ್ರಹಕ್ಕಿಲ್ಲ ಶೈತ್ಯಾಗಾರ

• ತಾವರೆಕೆರೆ ಟಿ.ನಾಗರಾಜ್



**ತಾವರೆಕೆರೆ:** ಜಿಲ್ಲಾ ಮಟ್ಟದಲ್ಲಿ ಹುಣಸೆ ಹಣ್ಣು ಸಂಗ್ರಹಕ್ಕೆ ಶೈತ್ಯಾಗಾರದ ಕೊರತೆಯ ಪರಿಣಾಮ ಸ್ಥಳೀಯ ವ್ಯಾಪಾರಸ್ಥರು ಪರದಾಟ ನಡೆಸುವಂತಾಗಿದೆ. ಶೈತ್ಯಾಗಾರದಲ್ಲಿ ಹುಣಸೆ ಹಣ್ಣನ್ನು ಸಂಗ್ರಹಿಸಡಲು ವ್ಯಾಪಾರಸ್ಥರು ನೆರೆ ರಾಜ್ಯವನ್ನು ಅವಲಂಬಿಸಬೇಕಾಗಿದೆ.

ಸಾಮಾನ್ಯವಾಗಿ ಹುಣಸೆ ಹಣ್ಣು ಫೆಬ್ರವರಿ ಮಾರ್ಚ್ ತಿಂಗಳಲ್ಲಿ ವ್ಯಾಪಾರಕ್ಕೆ ಡಿಮ್ಯಾಂಡ್ ಆದರೆ ಹಿಂದಿನ ವರ್ಷದಲ್ಲಿ 100 ರಿಂದ 120ರೂ ದರವಿತು. ಈ ಭಾರಿ ದಿಢೀರನೆ ಕೆಜಿಗೆ 50 ರಿಂದ 60 ರೂ. ಹುಣಸೆ ಹಣ್ಣನ್ನೆ ಆಶ್ರಯಿಸಿದ ಕುಟುಂಬಗಳು ರೈತರ ಆರ್ಥಿಕ ಮೂಲದಲ್ಲಿ ಹುಣಸೆ ಕಾಯಿ ಮರಗಳು ಒಂದು ಭಾಗವಾಗಿದ್ದು. ಹೆಚ್ಚು ಜಮೀನು ಹೊಂದಿರುವ ರೈತರು ನೂರರು ಹುಣಸೆ ಮರಗಳನ್ನು ನೆಟ್ಟು ತೋಪು ಮಾಡಿರುತ್ತಾರೆ. ಕಡಿಮೆ ಭೂಮಿಯಿರುವ ರೈತರು ಒಂದಿಷ್ಟು ಕಡಿಮೆ ಪ್ರಮಾಣದಲ್ಲಿ ಮರಗಳನ್ನು ನೆಟ್ಟು ವಾರ್ಷಿಕವಾಗಿ ಬಿಡುವ ಫಸಲಿನ ಆಧಾರದ ಮೇಲೆ ಲಾಭಂಶವನ್ನುಗಳಿಸುತ್ತಾರೆ.

> **ವ್ಯಾಪಾರಸ್ಥರಿಗೆ ಅನುಕೂಲವಗಲು ಹುಣಸೆ ಹಣ್ಣು ವ್ಯಾಪಾರ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಇದರ ವ್ಯಾಪಾರಸ್ಥರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಸಂಬಂಧ ಪಟ್ಟ ಇಲಾಖೆಯವರು ಗಮನಹರಿಸಿ ಪರಿಹರಿಸುವ ಬಗ್ಗೆ ಮುತವರ್ಜಿ ತೋರಿದರೆ ಬೆಳೆದ ರೈತರಿಗೂ ಲಾಭಾಂಶ ಸಿಗುತ್ತದೆ.**
> ■ ಕಾಳಪ್ಪನಹಳ್ಳಿ ಡಿ.ರಮೇಶ್, ರೈತ

ಒಂದು ಕಾಲದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹುಣಸೆ ಮರಗಳು ಹೆರಳವಾಗಿದ್ದು. ಹುಣಸೆಕಾಯಿ ಮರಗಳು ಅಭಿವೃದ್ಧಿಯ ಹೊಡೆತಕ್ಕೆ ಸಿಲುಕಿ ಕಡಿಮೆಯಾಗಿವೆ. ಇರುವ ಮರಗಳನ್ನು ನಂಬಿ ವ್ಯಾಪಾರ ಮಾಡಿ ಜೀವನ ನಿರ್ವಹಣೆ ಮಾಡುತ್ತಿರುವ ಕುಟುಂಬಗಳಿವೆ. ಹೊಸಕೋಟೆ ತಾಲ್ಲೂಕಿನ ನಂದಗುಡಿ ಹೋಬಳಿಯ ಯಳಚಹಳ್ಳಿ ಸೂಲಿಬೆಲೆ ಹೋಬಳಿಯ ಗಿಡ್ಡಪ್ಪನಹಳ್ಳಿ ಗ್ರಾಮದ ಬಹುತೇಕ ಕುಟುಂಬಗಳು ಹುಣಸೆ ಹಣ್ಣು ವ್ಯಾಪಾರದಲ್ಲಿ ತೊಡಗಿವೆ. ಒಂದೊಂದು ಮನೆಯಲ್ಲಿ ಟನ್ ಗಟ್ಟಲೆ ಕಾಯಿ ಸಂಗ್ರಹಿಸಿ ಇಟ್ಟುಕೊಂಡು ಫೆಬ್ರವರಿ ಮಾರ್ಚ್ ಹಾಗೂ ಏಪ್ರಿಲ್ ತಿಂಗಳುಗಳಲ್ಲಿ ಸೀಜನ್‌ಗೆ ಅನುಗುಣವಾಗಿ ಲಾಭವನ್ನ ಪಡೆದುಕೊಳ್ಳುತ್ತಾರೆ. ಈ ಭಾರಿ ಜಿಲ್ಲೆದ್ಯಾಂತ ಒಳ್ಳೆ ಫಸಲಾಗಿದ್ದು ಆದರೆ ಸರಿಯಾದ ದರಯಿಲ್ಲ. ಕಾಯಿ ಕೀಳಲು ಆಂಧ್ರದಿಂದ ಕೂಲಿ ಆಳುಗಳನ್ನ ಕರೆದುಕೊಂಡು ಬ್ರಂದು ಅವರಿಗೆ ಊಟ ಕೊಟ್ಟು 600 ರಿಂದ 800 ರೂಗಳು ಕೂಲಿ ಕೊಡಬೇಕು. ಅದರಲ್ಲೂ ಮರ ಹತ್ತುವ ಕೌಶಲ್ಯ ಹೊದಿರಬೇಕು ಆದರೆ ಕೆಜಿಗೆ ಬರಿ 50ರೂಗೆ ತಮಿಳುನಾಡಿನ ಕೃಷ್ಣಗಿರಿಗೆ ಇಲ್ಲಿಂದ ತೆಗೆದುಕೊಂಡು ಹೋಗಿ ಮಾರಟ ಮಾಡಬೇಕು. ಸಾರಿಗೆ ಖರ್ಚು ಕೂಲಿ ಎಲ್ಲ ಹೋಗಿ ಕೈಗೆ ಸರಿಯಾಗಿ 30ರೂ ಸಿಗುತ್ತಿಲ್ಲ.

# ಸಿರಿಧಾನ್ಯ ಸಂಸ್ಕರಣಾ ಕೇಂದ್ರ ವಿರಲಿ

### ರೇಡಿಯೋ ಕಿಸಾನ್ ದಿವಸ್ ಕಾರ್ಯಕ್ರಮದಲ್ಲಿ ಹಿರಿಯ ಕೃಷಿ ವಿಜ್ಞಾನಿ ದೇವರಾಜ ಅಭಿಪ್ರಾಯ



**ದಾವಣಗೆರೆ:** ಸಿರಿಧಾನ್ಯ ಬೆಳೆ ಉತ್ತೇಜಿಸುವ ನಿಟ್ಟನಲ್ಲಿ ಸರ್ಕಾರ ಪ್ರತಿ ಹೋಬಳಿಗೊಂದು ಸಂಸ್ಕರಣಾ ಕೇಂದ್ರ ತೆರೆಯಬೇಕೆಂದು ಹಿರಿಯ ಕೃಷಿ ವಿಜ್ಞಾನಿ ಡಾ.ಎನ್.ಟಿ. ದೇವರಾಜ ಅಭಿಪ್ರಾಯಪಟ್ಟರು.

ನಗರದ ಐಸಿಎಆರ್- ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ಬುಧವಾರ ಪ್ರಸಾರ ಭಾರತಿ ಮತ್ತು ಚಿತ್ರದುರ್ಗ ಆಕಾಶವಾಣಿ ಸಂಯುಕ್ತ ಆಶ್ರಯದಲ್ಲಿ ರೇಡಿಯೋ ಕಿಸಾನ್ ದಿವಸ್ ಅಂಗವಾಗಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಡೀ ವಿಶ್ವದಲ್ಲಿ ಭಾರತವು ಅತಿಹೆಚ್ಚು ಸಿರಿಧಾನ್ಯ ಉತ್ಪಾದಿಸುತ್ತಿದೆ. 17 ಮಿಲಿಯನ್ ಟನ್‌ಗೂ ಅಧಿಕ ಉತ್ಪಾದನೆ ಭಾರತದಲ್ಲಿ ಆಗುತ್ತಿದ್ದು, ಏಷ್ಯಾದ ಉತ್ಪಾದನೆಯಲ್ಲಿ ಶೇ.80ರಷ್ಟು ಪಾಲು ಭಾರತದ್ದಾಗಿದೆ. ಸಿರಿಧಾನ್ಯ ಉತ್ಪಾದನೆಯಲ್ಲಿ ಕರ್ನಾಟಕಇಡೀದೇಶದಲ್ಲೇಮುಂಚೂಣಿಯಲ್ಲಿದೆ. ಆದ್ದರಿಂದ ಸರ್ಕಾರ ಹೋಬಳಿಗೊಂದರಂತೆ ಸಿರಿಧಾನ್ಯ ಸಂಸ್ಕರಣಾ ಕೇಂದ್ರ ತೆರೆದರೆ ರೈತರಿಗೆ ಇನ್ನಷ್ಟು ಅನುಕೂಲವಾಗುತ್ತದೆ ಎಂದರು.

ಕೋವಿಡ್ ಕಾಲಘಟ್ಟದ ನಂತರ ಎಲ್ಲರಿಗೂ ಆರೋಗ್ಯದ ಮಹತ್ವ ಅರಿವಾಗಿದೆ. ಆರೋಗ್ಯಕ್ಕೆ ಹಿತವಾಗಿರುವ ಸಿರಿಧಾನ್ಯಗಳ ಬಗ್ಗೆ ಜಗತ್ತಿನ ಜನರು ಮಾತನಾಡುತ್ತಿದ್ದಾರೆ. 131 ರಾಷ್ಟ್ರಗಳಲ್ಲಿ ಸಿರಿಧಾನ್ಯ ಬೆಳೆಯಲಾಗುತ್ತಿದ್ದು, ಸುಮಾರು 60 ಕೋಟಿ ಜನ ಬಳಸುತ್ತಿದ್ದಾರೆ. ಇದು ಇನ್ನಷ್ಟು ಹೆಚ್ಚಾದರೆ ಆರೋಗ್ಯ, ಆದಾಯ ಲಭಿಸುತ್ತದೆ. ಪ್ರತಿಯೊಂದು ಮನೆಯಲ್ಲೂ ಮಧುಮೇಹಿಗಳಿರುವ ಇಂದಿನ ಸಂದರ್ಭದಲ್ಲಿ ಸಿರಿಧಾನ್ಯಗಳನ್ನು ಬಳಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಸಿರಿಧಾನ್ಯ ಬೆಳೆಗೆ ಒಳ್ಳೆಯ ಮಣ್ಣು, ವಾತಾವರಣ ಹೊಂದಿರುವ ಜಿಲ್ಲೆಯ ರೈತರಿಗೆ 2023ರ ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷಾಚರಣೆಯು ಸಾಕಷ್ಟು ಅವಕಾಶ ಒದಗಿಸಲಿದೆ ಎಂದರು.

ಕೃಷಿ ಇಲಾಖೆ ಉಪನಿರ್ದೇಶಕ ತಿಪ್ಪೇಸ್ವಾಮಿ ಮಾತನಾಡಿ, ಸಿರಿಧಾನ್ಯಗಳ ಉತ್ಪಾದನೆ, ಮೌಲ್ಯ ವರ್ಧನೆ, ಮಾರುಕಟ್ಟೆಗೆ ಸರ್ಕಾರ ಉತ್ತೇಜನ ನೀಡುತ್ತಿದೆ. ಪ್ರತಿ ಹೆಕ್ಟೇರ್‌ಗೆ 6500 ರೂ. ಪ್ರೋತ್ಸಾಹಧನ, ಪಿಎಂ ಕಿಸಾನ್ ಯೋಜನೆಯಡಿ 2 ಸಾವಿರ ರೂ. ನೀಡಲಾಗುತ್ತಿದೆ. ಕಡಿಮೆ ಬಡ್ಡಿ ದರದಲ್ಲಿ ಸಾಲಸೌಲಭ್ಯ ಒದಗಿಸಲಾಗುತ್ತಿದೆ. ಉತ್ಪನ್ನಗಳ ಮೌಲ್ಯವರ್ಧನೆಗೆ ಪ್ರತ್ಯೇಕ ಕೃಷಿ ನಿರ್ದೇಶನಾಲಯ ಪ್ರಾರಂಭವಾಗಿರುವುದರಿಂದ ರೈತರಿಗೆ ಅನುಕೂಲವಾಗಿದೆ. ಬೆಳೆಗಾರರ ಗುಂಪು ಅಥವಾ ರೈತ ಉತ್ಪಾದಕ ಕಂಪನಿಗಳ ಮೂಲಕ ರಫ್ತುದಾರರನ್ನು ಸಂಪರ್ಕಿಸಲೂ ಸಾಧ್ಯ ಎಂದರು.

ಆಕಾಶವಾಣಿ ಚಿತ್ರದುರ್ಗದ ಮುಖ್ಯಸ್ಥ ಎಂ. ರೇಣುಕಾ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೃಷಿ ತಜ್ಞರಾದ ಬಿ.ಟಿ. ಮಲ್ಲಿಕಾರ್ಜುನ, ಡಾ.ಎ.ಎಂ. ಮಾರುತೇಶ, ಡಾ.ಬಿ. ಗಂಗಾಧರ ಉಪನ್ಯಾಸ ನೀಡಿದರು. ಸರೋಜಮ್ಮ ಪಾಟೀಲ್, ಎಂ. ಶೋಭಾ, ಆರ್. ಎಸ್. ರಘು, ಜಿ.ಎಸ್. ಶ್ವೇತಾ ಸಿರಿಧಾನ್ಯ ಮೌಲ್ಯವರ್ಧನೆಯ ಅನುಭವ ಹಂಚಿಕೊಂಡರು. ಡಿ. ಕಾವ್ಯ ಅವರಿಗೆ ನೇಗಿಲ ಜಗಲಿ ಕಾರ್ಯಕ್ರಮದ ಬಹುಮಾನ ವಿತರಿಸಲಾಯಿತು. ಬಿ. ಸಿದ್ದಣ್ಣ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಂ.ಜಿ. ಬಸವನಗೌಡ ಸ್ವಾಗತಿಸಿದರು. ಎಂ.ಎಸ್. ಧ್ಯಾಮಲಾಂಬಿಕಾ ಸ್ವಾಗತಿಸಿದರು. ಜೆ. ರಘುರಾಜ್ ವಂದಿಸಿದರು.

Hosadigantha Pg-2

Udayavani Pg-3

ಸಹಕಾರ ಕ್ಷೇತ್ರದ ತವರು ರಾಜ್ಯವೆಂದೇ ಹೆಗ್ಗಳಿಕೆಗೆ ಪಾತ್ರವಾಗಿರುವ ಕರ್ನಾಟಕ ಸಹಕಾರ ವಲಯದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಗ್ರಾಮೀಣ ಭಾಗದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಿ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ. ಏಪ್ರಿಲ್‌ನಿಂದ ರೈತರಿಗೆ ನೀಡುವ ಬಡ್ಡಿರಹಿತ ಅಲ್ಪಾವಧಿ ಸಾಲದ ಮೊತ್ತವನ್ನು 3 ಲಕ್ಷ ರೂ.ಗಳಿಂದ 5 ಲಕ್ಷ ರೂ. ಗಳಿಗೆ ಹೆಚ್ಚಿಸಿರುವುದು ರೈತ ಸಮುದಾಯಕ್ಕೆ ದೊಡ್ಡ ಕೊಡುಗೆಯಾಗಿದೆ. 30 ಲಕ್ಷ ರೈತರಿಗೆ 25 ಸಾವಿರ ಕೋಟಿ ರೂ. ಸಾಲ ವಿತರಿಸುವ ಗುರಿಯನ್ನು ಸರ್ಕಾರ ಹಮ್ಮಿಕೊಂಡಿದೆ.

# ಕೃಷಿಕರ ಕೈ ಹಿಡಿದ ಸಹಕಾರ ರಂಗ

**ಬೆಂಗಳೂರು:** ಸಹಕಾರ ಸಂಘಗಳ ಮೂಲಕ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ ಆರ್ಥಿಕ ಚಟುವಟಿಕೆಗಳು ವೃದ್ಧಿಯಾಗುವಂತೆ ಮಾಡಿದ ಕೀರ್ತಿ ಕರ್ನಾಟಕ ಸರ್ಕಾರಕ್ಕೆ ಸಲ್ಲುತ್ತದೆ.

ದೇಶಕ್ಕೆ ಸಹಕಾರ ಸಂಘದ ಸ್ಫೂರ್ತಿ, ಕಾರ್ಯ ವೈಖರಿ ಬಗ್ಗೆ ಪಾಠ ಮಾಡಿದ ಕರ್ನಾಟಕದಲ್ಲಿ ಇಂದು ದೇಶದಲ್ಲಿಯೇ ಅತಿಹೆಚ್ಚಿನ ಸಹಕಾರ ಸಂಘಗಳಿವೆ. ಅಂತಹ ಸಹಕಾರ ಇಲಾಖೆಯ ಮೂಲಕ ರಾಜ್ಯದಲ್ಲಿ ರೈತರು, ಕಳ ಮತ್ತು ಮಧ್ಯಮ ವರ್ಗಗಳ ಜನರ ಆರ್ಥಿಕ ಬೇಡಿಕೆಗಳನ್ನು ಪೂರೈಸುವುದು ಹಾಗೂ ಜನರ ಆರೋಗ್ಯ ಕಾಪಾಡುವಂತಹ ಉಪಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಂಡು ದೇಶದಲ್ಲಿ ಮುಂಚೂಣಿಯಲ್ಲಿದೆ.

ದೇಶದ ಸಹಕಾರ ಕ್ಷೇತ್ರದಲ್ಲಿ ಭಾರೀ ಬದಲಾವಣೆ ತರುವ ಉದ್ದೇಶದಿಂದ ಹಾಗೂ ಜನರನ್ನು ಹೆಚ್ಚಾಗಿ ಸಹಕಾರ ಕ್ಷೇತ್ರದಲ್ಲಿ ತೊಡಗಿಕೊಳ್ಳುವಂತೆ ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರದಲ್ಲಿ ಹೊಸದಾಗಿ ಸಹಕಾರ ಸಚಿವಾಲಯ ಸ್ಥಾಪಿಸಿ, ಅದಕ್ಕೆ ಅಮಿತ್ ಶಾ ಅವರಂತಹ ಅನುಭವಿ ಮತ್ತು ದೂರದೃಷ್ಟಿಯುಳ್ಳನಾಯಕನನ್ನು ಸಚಿವರನ್ನಾಗಿ ಮಾಡಿದರು. ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಮಾರ್ಗದರ್ಶನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಂದಾಳತ್ವದಲ್ಲಿ ರಾಜ್ಯದ ಸಹಕಾರ ಇಲಾಖೆ ಎಲ್ಲ ವರ್ಗದ ಜನರ ಅಗತ್ಯತೆಗೆ ತಕ್ಕಂತೆ ಕೆಲಸ ಮಾಡುತ್ತಿದೆ. ಅದರಲ್ಲೂ, ರೈತರ ಕೃಷಿ ಚಟುವಟಿಕೆಗೆ ಅಗತ್ಯವಿರುವ ವಸ್ತುಗಳ ಪೂರೈಕೆ, ಆರ್ಥಿಕ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಹಲವು ದಿಟ್ಟ ಹೆಜ್ಜೆ ಇಡಲಾಗಿದೆ.

**ಬಡ್ಡಿರಹಿತ ಸಾಲ 3 ರಿಂದ 5 ಲಕ್ಷಕ್ಕೆ ಹೆಚ್ಚಳ:** ಈ ವರ್ಷದಿಂದ ರೈತರಿಗೆ ನೀಡುವ ಬಡ್ಡಿರಹಿತ ಅಲ್ಪಾವಧಿ ಸಾಲದ ಮಿತಿ ಮೂರು ಲಕ್ಷ ರೂ.ಗಳಿಂದ ಐದು ಲಕ್ಷ ರೂ.ಗೆ ಹೆಚ್ಚಿಸಲು ತೀರ್ಮಾನಿಸಲಾಗಿದ್ದು, ಏಪ್ರಿಲ್ ನಂತರ 30 ಲಕ್ಷ ರೈತರಿಗೆ 25 ಸಾವಿರ ಕೋಟಿ ರೂ. ಸಾಲ ವಿತರಿಸುವ ಗುರಿ ಹೊಂದಲಾಗಿದೆ. ರಾಜ್ಯದಲ್ಲಿ ಕೃಷಿ ಮತ್ತು ರೈತರ ಅನುಕೂಲಕ್ಕಾಗಿ ಸೇವೆ ನೀಡುತ್ತಿರುವ ಸಹಕಾರ ಸಂಘಗಳು ಹೆಚ್ಚಾಗಿವೆ. ಈ ಸಹಕಾರ ಸಂಘಗಳು ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಆರ್ಥಿಕ ನೆರವು ನೀಡಲಾಗುತ್ತಿದೆ. ಅದರಂತೆ 2022-23ನೇ ಸಾಲಿಗೆ ರಾಜ್ಯದ 33 ಲಕ್ಷ ರೈತರಿಗೆ ಕೂಸ್ಕ ಬಡ್ಡಿ ದರದಲ್ಲಿ 24 ಸಾವಿರ ಕೋಟಿ ರೂ. ಬೆಳೆ ಸಾಲ ವಿತರಿಸುವ ಗುರಿ ಹೊಂದಲಾಗಿತ್ತು. ಫೆಬ್ರವರಿ ಅಂತ್ಯದವರೆಗೆ ಶೇ.90 ರಷ್ಟು ಗುರಿ ಸಾಧಿಸಲಾಗಿದೆ.

ರೈತರಿಗೆ ಶೇ.3 ಬಡ್ಡಿದರದಲ್ಲಿ 10 ಲಕ್ಷ ರೂ.ವರೆಗೆ ಕೃಷಿ ಸಂಬಂಧಿತ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ವಿತರಿಸುವ ಗುರಿಯನ್ನು ಹೊಂದಲಾಗಿತ್ತು: ಅದರಂತೆ 25 ಲಕ್ಷ ರೈತರಿಗೆ 782 ಕೋಟಿ ರೂ. ಸಾಲ ನೀಡಲಾಗಿದೆ. ಅದರ ಜತೆಗೆ 20,466 ಗುಂಪುಗಳಿಗೆ ರಿಯಾಯಿತಿ ಬಡ್ಡಿ ದರದಲ್ಲಿ 839 ಕೋಟಿ ರೂ. ಸಾಲ ನೀಡಲಾಗಿದೆ.

ಸರ್ಕಾರದ ಸಾಲ ಮನ್ನಾ ಯೋಜನೆ 2018ರ ಅಡಿಯಲ್ಲಿ ತಲಾ 1 ಲಕ್ಷ ರೂ.ಗಳವರೆಗೆ ಸಾಲ ಮನ್ನಾ ಬಾಬ್ತಾಗಿ 17.06 ಲಕ್ಷ ರೈತರಿಗೆ 7,987 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಬಡ್ಡಿ ಸಹಾಯಧನ ಯೋಜನೆ ಅಡಿಯಲ್ಲಿ 2022-23ನೇ ಸಾಲಿಗೆ ಬಜೆಟ್‌ನಲ್ಲಿ ಕಾಯ್ದಿರಿಸಿದ 1,078 ಕೋಟಿ ರೂ.ಗಳ ಪೈಕಿ 799 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಹೀಗೆ ರೈತರು ಸೇರಿ ಇನ್ನಿತರ ವರ್ಗದವರಿಗೆ ಆರ್ಥಿಕ ನೆರವು ನೀಡಲು ಸಹಕಾರ ಇಲಾಖೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಂಡಿದೆ. ಅದರ ಜತೆಗೆ ಆರ್ಥಿಕ ನೆರವಿನ ಯೋಜನೆಗಳು ಫಲಾನುಭವಿಗಳಿಗೆ ಇನ್ನಷ್ಟು ಪರಿಣಾಮಕಾರಿಯಾಗಿ ಮುಟ್ಟುವಂತೆ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ಭೂ ಸಿರಿ-10 ಸಾವಿರ ಸಹಾಯಧನ:** ಕಿಸಾನ್ ಕಾರ್ಡ್ ಹೊಂದಿರುವ ರೈತರಿಗೆ ಭೂ ಸಿರಿ ಯೋಜನೆಯಡಿ 10 ಸಾವಿರ ರೂ. ಹೆಚ್ಚುವರಿ ಸಹಾಯಧನ ನೀಡಲು ನಿರ್ಧರಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ರೈತರಿಗೆ ಬೀಜ, ರಸಗೊಬ್ಬರ, ಕ್ರಿಮಿನಾಶಕ ಸೇರಿ ಪರಿಕರ ಖರೀದಿಗೆ ಅನುಕೂಲವಾಗಿದ್ದು ಇದರಿಂದ 50 ಲಕ್ಷ ರೈತರಿಗೆ ಅನುಕೂಲವಾಗಲಿದೆ. ರಾಜ್ಯದ 56 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರ ಕುಟುಂಬಗಳಿಗೆ 180 ಕೋಟಿ ರೂ. ವೆಚ್ಚದಲ್ಲಿ ಜೀವನ್‌ಜ್ಯೋತಿ ವಿಮಾಯೋಜನೆ ರೂಪಿಸಿ ರೈತರ ಬದುಕಿಗೆ ಭದ್ರತೆ ಕಲ್ಪಿಸುವ ಕೆಲಸ ಮಾಡಲಾಗಿದೆ.

**ಯಶಸ್ವಿನಿ ರಾಜ್ಯೋತ್ಸವದ ಕೊಡುಗೆ:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳ ಪೈಕಿ ಅತ್ಯಂತ ಜನಪ್ರಿಯವಾದ ಯಶಸ್ವಿನಿ ಆರೋಗ್ಯ ಯೋಜನೆಯನ್ನು ಪ್ರಸಕ್ತ ಸಾಲಿನಿಂದ ಸಹಕಾರ ಇಲಾಖೆ ಪುನಾರಂಭಿಸಿದೆ. 2003ರಲ್ಲಿ ಆರಂಭವಾಗಿದ್ದ ಯೋಜನೆಯನ್ನು 2018ರ ಮೇ 31ರಿಂದ ಸ್ಥಗಿತಗೊಳಿಸಲಾಗಿತ್ತು. ಆರೋಗ್ಯ ಕರ್ನಾಟಕ ಯೋಜನೆ ಜಾರಿ ಹಿನ್ನೆಲೆಯಲ್ಲಿ ಯಶಸ್ವಿನಿ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಯಶಸ್ವಿನಿಗೆ ಸಾಕಷ್ಟು ಬೇಡಿಕೆಗಳು ಬಂದ ಹಿನ್ನೆಲೆಯಲ್ಲಿ, ಜನರ ಆಶೋತ್ತರಕ್ಕೆ ಮನ್ನಣೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಜನರಿಗೆ ಕನ್ನಡ ರಾಜ್ಯೋತ್ಸವದ ಕೊಡುಗೆಯಾಗಿ 2022ರ ನವೆಂಬರ್ 1ರಂದು ಮರು ಜಾರಿ ಮಾಡಿದರು. ಅಲ್ಪಾವಧಿ ಯೋಜನೆಗಾಗಿ 300 ಕೋಟಿ ರೂ. ಅನುದಾನವನ್ನು ನಿಗದಿ ಮಾಡಿ, 50 ಕೋಟಿ ರೂ. ಅನುದಾನ ಬಿಡುಗಡೆಯನ್ನೂ ಮಾಡಿದ್ದಾರೆ.

ಹೊಸದಾಗಿ ಜಾರಿ ಮಾಡಲಾದ ಯಶಸ್ವಿನಿ ಯೋಜನೆಯಲ್ಲಿ ಸಾಕಷ್ಟು ಬದಲಾವಣೆ ತಂದು, ಯೋಜನೆಯ ಫಲಾನುಭವಿಗಳಿಗೆ ಹೆಚ್ಚಿನ ಅನುಕೂಲವಾಗುವಂತೆ ಮಾಡಲಾಗಿದೆ. ಅದರ ಪ್ರಕಾರ ಈ ಹಿಂದಿಗಿಂತ ಹೆಚ್ಚಿನ ಕಾಯಿಲೆಗೆ ಚಿಕಿತ್ಸೆ ದೊರೆಯುವಂತೆ ಮಾಡಲಾಗುತ್ತಿದೆ. ಹೊಸ ನಿಯಮದಂತೆ ಫಲಾನುಭವಿಗಳು 1,650 ಕಾಯಿಲೆಗಳಿಗೆ ಯಶಸ್ವಿನಿ ಅಡಿಯಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ. ಅಲ್ಲದೆ ಈ ಹಿಂದೆ 3 ಲಕ್ಷ ರೂ.ಗಳದ್ದ ಚಿಕಿತ್ಸಾ ಮೊತ್ತ ಈಗ 5 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಆಮೂಲಕ ಯಶಸ್ವಿನಿ ಯೋಜನೆಯಿಂದ ಸಂಪೂರ್ಣ ಫಲ ಸಿಗುವಂತೆ ಮಾಡಲಾಗಿದೆ.

ಅಲ್ಲದೆ ಪರಿಶಿಷ್ಟ ಜಾತಿಮತ್ತು ಪರಿಶಿಷ್ಟ ಪಂಗಡದ ಸದಸ್ಯರ ಅನುಕೂಲಕ್ಕಾಗಿ ಅವರ ವಾರ್ಷಿಕ ವಂತಿಗೆಯನ್ನು ರಾಜ್ಯ ಸರ್ಕಾರವೇ ಭರಿಸಲಾಗುತ್ತದೆ. ಉಳಿದಂತೆ ಗ್ರಾಮೀಣ ಭಾಗದ ಸಹಕಾರ ಸಂಘಗಳ ಸದಸ್ಯರ ಕುಟುಂಬದ ನಾಲ್ಕು ಮಂದಿಯ ನೋಂದಣಿ ಮತ್ತು ವಾರ್ಷಿಕ ವಂತಿಕೆ 500 ರೂ. ಹಾಗೂ ನಗರ ಪ್ರದೇಶದ ಸಹಕಾರ ಸಂಘಗಳ ಸದಸ್ಯರ ಕುಟುಂಬದ ನಾಲ್ಕು ಮಂದಿಯ ನೋಂದಣಿಗೆ 1 ಸಾವಿರ ರೂ. ನಿಗದಿ ಮಾಡಲಾಗಿದೆ. ಉಳಿದಂತೆ ಹೆಚ್ಚುವರಿ ಫಲಾನುಭವಿಯನ್ನು ಯೋಜನೆಗೆ ಸೇರಿಸಬೇಕೆಂದರೆ ಸದಸ್ಯರು ಪ್ರತಿ ಫಲಾನುಭವಿಗೆ ತಲಾ 200 ರೂ. ಹೆಚ್ಚುವರಿ ಮೊತ್ತವನ್ನು ನೋಂದಣಿ ವೇಳೆ ನೀಡಬೇಕಿದೆ. ಯಶಸ್ವಿನಿ ಯೋಜನೆಗೆ ನೋಂದಣಿ ಮಾಡಿಕೊಂಡ 15 ದಿನಗಳಲ್ಲಿ ಅವರು ಫಲಾನುಭವಿಗಳಾಗಲಿದ್ದು 2023ರ ಜ. 10ರಿಂದ ಡಿ. 31ರವರೆಗೆ ಫಲಾನುಭವಿಗಳು ಯೋಜನೆಯ ಪ್ರಯೋಜನ ಪಡೆಯುವಂತೆ ಮಾಡಲಾಗಿದೆ.

ಗುರಿ ತಲುಪಲು ಯಶಸ್ವಿ: ಯಶಸ್ವಿನಿ ಯೋಜನೆ ಅಡಿಯಲ್ಲಿ ಎಲ್ಲ ಬಗೆಯ ಸಹಕಾರ ಸಂಘಗಳಲ್ಲಿ ಫಲಾನುಭವಿಗಳನ್ನು ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ 30 ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿಯನ್ನು ರಾಜ್ಯ ಸರ್ಕಾರ ಮತ್ತು ಸಹಕಾರ ಇಲಾಖೆ ಹೊಂದಿತ್ತು. ಅಲ್ಲದೆ, 2022ರ ನ. 1ರಂದು ಆರಂಭಿಸಲಾದ ನೋಂದಣಿ ಪ್ರಕ್ರಿಯೆ ಡಿ. 31ಕ್ಕೆ ಅಂತ್ಯವಾಗಲಿದೆ ಎಂದು ತಿಳಿಸಲಾಗಿತ್ತು. ಆದರೂ, ಆರ್ಹರೆಲ್ಲರಿಗೂ ಯೋಜನೆಯ ಸೇವೆ ದೊರೆಯುವಂತಾಗಬೇಕು ಎಂಬ ಕಾರಣಕ್ಕಾಗಿ ಯೋಜನೆಗೆ ನೋಂದಣಿ ಮಾಡಿಕೊಳ್ಳುವ ಅವಧಿಯನ್ನು ವಿಸ್ತರಿಸಿ 2023ರ ಜ. 31 ನೋಂದಣಿಗೆ ಅಂತಿಮ ದಿನವಾಗಿತ್ತು. ಆದರ ಪ್ರಕಾರ ಜ.10ರವರೆಗೆ 30.19 ಲಕ್ಷ ಜನರು ಯಶಸ್ವಿನಿ ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಮಾರ್ಚ್ 31ರವರೆಗೂ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.

**45,210**
ರಾಜ್ಯದಲ್ಲಿರುವ ಸಹಕಾರ ಸಂಘಗಳು

**5751**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು

**14,702**
ಪ್ರಾಥಮಿಕ ಹಾಲು ಉತ್ಪಾದಕರ ಸಂಘಗಳು

**21**
ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು

**176**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು

**264**
ಪಟ್ಟಣ ಸಹಕಾರಿ ಬ್ಯಾಂಕ್‌ಗಳು



ವಿಕಾಸ ಕರ್ನಾಟಕ
ಸರ್ವಜನರ ಅಭಿವೃದ್ಧಿ ಪರ್ವ

ಯಶಸ್ವಿನಿ ರೈತರ ಆರೋಗ್ಯ ಸಾಧನೆ ಭಾಗ್ಯ



## ರೈತರ ನೆರವಿಗೆ ಬೆಂಬಲ ಬೆಲೆ

**ಬೆಲೆ** ಕುಸಿತ ಸಂದರ್ಭದಲ್ಲಿ ರೈತರ ನೆರವಿಗೆ ಧಾವಿಸಿದ ಸರ್ಕಾರ, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ, ರಾಗಿ, ಜೋಳ, ಹೆಸರುಕಾಳು ಮತ್ತು ತೊಗರಿ ಮುಂತಾದ ಆಹಾರ ಧಾನ್ಯಗಳ ಖರೀದಿಗಾಗಿ 6,650 ಕೋಟಿ ರೂ. ಒದಗಿಸಿದೆ. 3.6 ಲಕ್ಷ ರೈತರಿಗೆ ಅನುಕೂಲ ಕಲ್ಪಿಸಲು ಐದು ಲಕ್ಷ ಟನ್ ರಾಗಿ ಪ್ರತಿ ಕ್ವಿಂಟಾಲ್‌ಗೆ 3,578 ರೂ. ದರದಲ್ಲಿ ಖರೀದಿಸಿ 1,879 ಕೋಟಿ ರೂ. ಮೊತ್ತ ಪಾವತಿಸಲಾಗಿದೆ. ಜತೆಗೆ, 75 ಸಾವಿರ ರೈತರಿಂದ ಭತ್ತ ಹಾಗೂ 40 ಸಾವಿರ ರೈತರಿಂದ ಬಿಳಿ ಜೋಳ ಖರೀದಿಸಲು 1,072 ಕೋಟಿ ರೂ. ಒದಗಿಸಲಾಗಿದೆ. ಈ ವರ್ಷ ಕುಚ್ಚಲಕ್ಕಿ ಖರೀದಿಗೂ ಪ್ರೋತ್ಸಹ ನೀಡಲಾಗಿದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ಧಾನ್ಯಗಳಿಗೆ, ರೈತರಿಗೆ ತ್ವರಿತವಾಗಿ ಹಣಪಾವತಿ ಮಾಡಲು ಸ್ವಾತಿಸಿರುವ ಆವರ್ತ ನಿಧಿಯನ್ನು ಸರ್ಕಾರದಲ್ಲಿ ಎರಡು ಕೋಟಿ ರೂ.ವರೆಗೆ ಹೆಚ್ಚಿಸುವ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅದರಂತೆ ಕರ್ನಾಟಕ ಆಹಾರ ನಿಗಮಕ್ಕೆ ಧಾನ್ಯಗಳ ಖರೀದಿಗೆ ಬಿಡುಗಡೆ ಮಾಡಿರುವ ಅನುದಾನ 1 ಸಾವಿರ ಕೋಟಿ ರೂ. ಇತ್ತು. ಹೆಚ್ಚುವರಿಯಾಗಿ ಒಂದು ಸಾವಿರ ಕೋಟಿ ರೂ. ಒದಗಿಸಲಾಯಿತು. ಪ್ರಸಕ್ತ ಬಜೆಟ್‌ನಲ್ಲೂ 1,500 ಕೋಟಿ ರೂ. ಒದಗಿಸಿ ಆವರ್ತ ನಿಧಿ ಮೊತ್ತ 3500 ಕೋಟಿ ರೂ.ಗೆ ಏರಿಸುವ ಭರವಸೆ ನೀಡಲಾಗಿದೆ.

**ಆವರ್ತ ನಿಧಿ ಮೊತ್ತ 3500 ಕೋಟಿ ರೂ. ಏರಿಸುವ ನಿರ್ಧಾರ**

Deccan Herald Pg-1

HIGH HOPES

# Northeast spices up saffron battle with own bloom



Yuksom in Sikkim showed 100% survival rate while Upper Shillong, Meghalaya showed the lowest survival rate (43.9%)

### Scent of success

- Pilot project run under Mission Saffron in 17 high altitude locations in Arunachal Pradesh, Sikkim, Mizoram and Meghalaya
- Results indicate that the soil and climate are conducive for commercial cultivation of saffron
- With results promising, NECTAR has started work on commercially cultivating saffron in the Northeast

**SUMIR KARMAKAR**
GUWAHATI, DHNS

Sometime soon, the saffron threads on top of your favourite kheer and other food items could come from the Northeast.

Kashmir might be the undisputed champion when it comes to saffron, but the Northeast is on the cusp of emerging as a new supplier of the spice that is coveted for its fragrance and medicinal properties.

A Centre-funded pilot run under Mission Saffron in 17 high altitude locations in Arunachal Pradesh, Sikkim, Mizoram and Meghalaya has shown promising results.

The project was undertaken by the North East Centre for Technology Application and Reach (NECTAR), an agency under the Union ministry of science and technology. Buoyed by the outcome, NECTAR has started work on commercially cultivating saffron in the Northeast.

"The trial cultivation in the four states was successful with good quality crops. About 1,000 farmers are now connected with us. We are planning in a big way this time and targeting to do commercial cultivation in 500 acres of land," Arun Kumar Sarma, director general of NECTAR, told *DH*.

Saffron, locally known as kesar or zafran, is often referred to as 'red gold' due to its high cost.

India consumes about 100MT of saffron annually but produces only 15 MT (2020-2021), mainly in Pampore of Kashmir, a glaring demand-supply mismatch that the Centre now hopes to address by the Northeast gamble.

Similar cultivation efforts are also under way in Himachal Pradesh and Uttarakhand.

▸ Saffron, Page 3B

# Spring blooms

The Hindu Pg-1



**Hit with tourists:** Gardeners working in the tulip garden on the banks of the Dal Lake in Srinagar. The Indira Gandhi Memorial Tulip Garden, spread over 30 acres with an estimated 16 lakh flowers, will be open to the public from March 19. NISSAR AHMAD

# New gecko species from MM Hills named after scientist Ganeshaiah

Niranjan.Kaggere
@timesgroup.com

**Bengaluru:** Acclaimed agriculture scientist from University of Agricultural Sciences (UAS) Bengaluru and noted Kannada writer KN Ganeshaiah on Tuesday became one of the few Kannadigas with multiple eponymous taxa (floral-faunal species) to their credit.

Honouring Ganeshaiah's contribution to the world of ecology, researchers have named a new species of gecko, endemic to Male Mahadeshwara Hills (MM Hills) in Chamarajanagar, after him. This is the fourth species named after Ganeshaiah by researchers from various scientific institutions.

Working in MM Hills and surrounding areas of Eastern Ghats, researchers from Bengaluru-based Ashoka Trust for Research in Ecology and Environment (ATREE) had come across a distinct rupicolous Cnemaspis (Afro-Asian gekkonid genus) that bears a unique combination of morphological and colour pattern that does not occur in other closely related species.



**RARE FIND:** The new species of gecko is endemic to MM Hills. This is the fourth species to be named after Ganeshaiah

> The discovery of the new species is indeed an exciting achievement and congratulations to the team. I am thankful to the researchers' team for the honour
> **KN Ganeshaiah** | AGRICULTURE SCIENTIST & KANNADA WRITER



After prolonged comparative studies and multiple consultations with experts from Bombay Natural History Society (BNHS), Herpetology Laboratory at La Sierra University of California and San Diego Natural History Museum in California, researchers named the new species 'Cnemaspis ganeshaiahi' or Ganeshaiah's dwarf gecko.

One of the researchers from ATREE and author of the paper, NA Aravind, said: "We discovered this species on our research site campus at Keeranhola village located on a valley within the MM Hills Wildlife Sanctuary. The same was communicated to forest department officials and permission was sought to collect the specimens for further research on the species. Molecular and morphological analysis pointed out strong variation in the morphological characteristics."

Aravind further said that the species is currently known only in MM Hills and neighbourhood which is dry deciduous and scrub forests habitat with large granite boulders. "The species is found in crevices of walls or in boulders and appears to be diurnal. We decided to name the species in honour of Prof KN Ganeshaiah for his significant contribution to ecology, evolutionary biology and conservation biology and his work as a professor of plant genetics and breeding at UAS," Aravind said.

Previously, a grass species (Centotheca ganeshaiahiana) at the Saddle Peak National Park, North Andaman, a small cryptic ant species (Parasyscia ganeshaiahi) in decaying logs or under rocks and a cycas species (Cycas uma-ganeshaiahi) were named after him.

The team included researchers Surya Narayanan, Saunak Pal, L Lee Grismer and NA Aravind.

Similar to the eponymous taxa of Ganeshaiah, about seven species were named after acclaimed botanist and writer BGL Swamy. Close to about 10 species have also been named after Prof M Sanjappa, a renowned botanist from Karnataka. However, among all Kannadigas, Prof CA Viraktamath, a retired entomologist from the UAS, has the highest number of species (40) named after him.

The Times Of India Pg-3